ಶ್ರೀ ಸಿ. ಬೈರೇಗೌಡ.—ಮೂನ್ಯ ಮಂತ್ರಿಗಳು ಇಲ್ಲಿ ಇನ್ನೂ ಫೈನಲೈಸು ಆಗಿಲ್ಲ ಎಂದು ಹೇಳಿದರು. ಆದರೆ ಮಂತ್ರಿ ಮಂಡಲದ ಒಬ್ಬ ಸದಸ್ಯರು ಕುಣಿಗಲ್‌ಗೆ ಬಂದಾಗ ಅಲ್ಲಿ ಹೇಳುತ್ತಾ ಕುಣಿಗಲ್‌ಗೂ ಹಾಗು ತಿಪಟೂರಿಗೂ ನೀರು ಬಂತು ಎಂದು ಹೇಳಿರುವ ಹೇಳಿಕೆಗಳು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಎಲ್ಲಿ ಯಾವ ಸಂದರ್ಭದಲ್ಲಿ ಹೇಳಿದರು? ಅದು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀಕೆ. ಹೆಚ್. ಹನುಮೇಗೌಡ.—ನಮ್ಮ ಹಾಸನ ತಾಲ್ಲೂಕಿನಲ್ಲೂ ಆಗಾಗ್ಗೆ ಬರಗಾಲಕ್ಕೆ ಸಿಗುವ ಪ್ರದೇಶಗಳೂ ಇವೆ ಮತ್ತು ತುಮಕೂರು ಜಿಲೆಯಲ್ಲೂ ನೀರಿಲ್ಲದೆ ಅಭಾವವಿರುವ ಕಡೆಗಳೂ ಇವೆ. ಇವೆರಡಕ್ಕೂ ಸೇರಿದಂತೆ ಬಲದಂಡೆ ನಾಲಾ ಮಾಡಿ ಒಂದು ಯೋಜನೆ ಮಾಡುತ್ತೇವೆಂದು ಹೇಳಿದ್ದರು. ಇದು ಯಾವ ಹಂತದಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಹಾಸನ ಜಿಲ್ಲೆಗೆ, ಹಾಗೂ ತುಮಕೂರು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಗೂ ಅನುಕೂಲವಾಗುವಂತೆ ಒಂದು ಯೋಜನೆ ಮಾಡಬೇಕೆಂದು ಇತ್ತು. ಹಾಸನದ ಜಿಲ್ಲೆಯಲ್ಲಿ ಹೇಮಾವತಿ ಎಡ ಹಾಗೂ ಬಲ ದಂಡೆ ನಾಲಾಗಳನ್ನೂ ಹೈ ಲೆವೆಲ್‌ನಲ್ಲಿ ತರಬೇಕೆಂದೂ ಇದೆ. ಆ ಉದ್ದೇಶದಿಂದಲೇ ಈ ಯೋಜನೆಯನ್ನು ತೆಗೆದುಕೊಂಡಿರತಕ್ಕದ್ದು.

ಶ್ರೀ ಅಂದಾನಯ್ಯ.— ರಾಜ್ಯ ಮಟ್ಟದಲ್ಲಿರುವ ಈ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲಾಗಿದೆಯೇ ಹಾಗೇ ಕಳುಹಿಸಿರುವುದು ಏನಾದರೂ ಮೂರ್ಪಾಡಾಗಿ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಈಗಾಗಲೇ ಇದನ್ನು ಸಿ. ಡಬ್ಲ್ಯು.ಪಿ.ಸಿ.ಗೆ ಕಳುಹಿಸಲಾಗಿದೆ.

WATER TO TUMKUR DISTRICT FROM BHADRA CHANNEL

570. SRI N BASAVAIAH (Chikkanayakanahalli).— Will the Chief Minister be pleased to state.—

(a) the prospects of bringing water to Tumkur district from Bhadra Channel in light of the recent report of the K.G. Commission

(b) whether the proposed scheme of bringing water to Tumkur District is feasible as per the inter State distribution of water, if not, the alternative for it,

(c) whether Government would provide sufficient funds in the current year's budget to complete the channel works of Hemavathi Project to supply water to Tumkur district as to raise crops by the end of this year?

SRI M. MALLIKARJUNA SWAMY (Minister for Education) (On behalf of SRI D. DEVARAJ URS (Chief Minister).—

(a) No possibility.

(b) Not feasible. The alternative is to bring water from Hemavathi Project.

(c) The extention of the Hemavathi Canal to Tumkur is part of the Second stage of the Hemavathi Project which is not yet approved.

ಶ್ರೀ ಎನ್. ಬಸವಯ್ಯ.—ತುಮಕೂರು ಜಿಲ್ಲೆಯಲ್ಲಿರುವ ತುಮಕೂರು ಪಾವಗಡ, ಚಿಕ್ಕನಾಯಕನಹಳ್ಳಿ ಮತ್ತು ಶಿರಾ ಈ ತಾಲ್ಲೂಕುಗಳು ಯಾವಾಗಲೂ ಬರಗಾಲಕ್ಕೆ ಸಿಗುವಂತಹ ಭಾಗಗಳು ಇಲ್ಲಿಗೆ ಭದ್ರಾ ಜಲಾಶಯದಿಂದ ನೀರು ತರುವ ಯೋಜನೆ ಇತ್ತು ಇದನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿಲ್ಲವೇ

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದರಲ್ಲಿ ಕಡೂರು ಹಾಗೂ ತರೀಕೆರೆ ಇವೆರಡು ತಾಲ್ಲೂಕುಗಳೂ ಸೇರುತ್ತವೆ ಇದಕ್ಕೆ ತಕ್ಕ ಯೋಜನೆ ಮಾಡಲು ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ.

ಶ್ರೀ ಎನ್. ಬಸವಯ್ಯ :—ನಾನು ಕೇಳಿದ್ದು ತುಮಕೂರು ಜಿಲೆ ಯ ಶಿರಾ, ಮಧುಗಿರಿ ಚಿಕ್ಕನಾಯಕನಹಳ್ಳಿ ಮುಂತಾದ ಭಾಗಗಳಿಗೂ ಸಹ ಈ ನಾಲೆಯಿಂದ ಅನುಕೂಲ ಇದೆಯೇ ? ಎಂದು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಅದು ಸಾಧ್ಯತೆ ಇಲ್ಲ.

SRI H. D. DEVE GOWDA :—Psojects like Bhadra and Upper Bhadra we cannot taken up because of the Award Till that question is settled we cannot take up these projects.

SRI M. MALLIKARJUNASWAMY :—It cannot be said that this is the observation made in that Award. It cannot be that the demand for these Projects cannot be considered. Until and unless water is available, the Tungabhadra projects may be deferred ಎಂದು ಹೇಳಿದ್ದಾರೆ, ಮಾನ್ಯ ಬಸವಯ್ಯನವರು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕೆಂದರೆ ೧೧೦ ಮೈಲಿ ದೂರದವರೆಗೆ ನಾಲೆ ತೆಗೆದು ೨ ಲಕ್ಷ ೪೨ ಸಾವಿರ ಎಕರೆಗೆ ನೀರು ಕೊಡಬೇಕೆಂಬ ಉದ್ದೇಶವಿದೆ. ಮತ್ತು ತುಮಕೂರು ಜಿಲ್ಲೆಗೆ ಈ ನೀರನ್ನು ಕೊಡಬೇಕಾದರೆ ಪ್ರತ್ಯೇಕ ನಾಲೆಯನ್ನು ತೆಗೆದು ಕೊಡಬೇಕಾಗುತ್ತದೆಯಾದ್ದರಿಂದ, ಅದು ಸಾಧ್ಯವಾಗುವುದಿಲ್ಲ.

ಶ್ರೀ ಎನ್ ಬಸವಯ್ಯ :—ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಹೇಮಾವತಿ ಯೋಜನೆಯಿಂದ ನೀರನ್ನು ತರುವುದೇ ಪರ್ಯಾಯ ವ್ಯವಸ್ಥೆಯಾಗಿದೆ ಎಂದು ಹೇಳಿದ್ದೀರಿ. ಈ ವ್ಯವಸ್ಥೆಯಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯ ಕೆಲವು ಬಾಗಗಳು ಸೇರಿವೆಯೇ ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ :—ಹೇಮಾವತಿ ಕಾಲುವೆಯನ್ನು ತುಮಕೂರಿಗೆ ವಿಸ್ತರಿಸುವುದು ಹೇಮಾವತಿ ಯೋಜನೆಯ ಎರಡನೇ ಹಂತವಾಗಿದ್ದು ಅದನ್ನಿನ್ನೂ ಆಡುಮೋದಿಸಲಾಗಿಲ್ಲ ಎಂದು ಉತ್ತರದಲ್ಲಿ ಹೇಳಲಾಗಿದೆ.

ಶ್ರೀ ಎನ್. ಬಸವಯ್ಯ ತುರುವೇಕೆರೆ ಮತ್ತು ಕುಣಿಗಲ್ ಮಧ್ಯೆ ಚಿಕ್ಕ ನಾಯಕನಹಳ್ಳಿ ಬರುತ್ತದೆ. ಮತ್ತು ಆ ಭಾಗ ಎಟ್ಟವಾಗಿರುವುದರಿಂದ ಅಲ್ಲಿಗೂ ಈ ಹೇಮಾವತಿ ಯೋಜನೆಯಿಂದ ನೀರನ್ನು ಕೊಡುವುದಕ್ಕೆ ಸಾಧ್ಯತೆ ಇದೆಯೇ ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ :—ಇದು ಇನ್ನೂ ವಿವರವಾಗಿ ವರ್ಕ್ ಔಟ್ ಆಗಬೇಕಾಗಿರುವುದರಿಂದ, ಮುಂದೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪರಿಶೀಲನೆ ಮಾಡೋಣ.

MURDERS COMMITTED IN JAMKHANDI TALUK

534 SRI P. M. BANGI (Jamkhandi).—

Will the Chief Minister be pleased to state.—

(*a*) the number of murders committed from June 1972 to the end of January 1974 in Jamkhandi Taluk, Bijapur District.